# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 147 |
| 02. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು: | | ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 03. | ಉತ್ತರಿಸುವ ದಿನಾಂಕ | : | 10-07-2018 |
| 04. | ಉತ್ತರಿಸುವ ಸಚಿವರು. | : | ಉಪ ಮುಖ್ಯ ಮಂತ್ರಿಯವರು |

| ಕ್ರಸಂ. | ಪ್ರಶ್ನೆಗಳು | ಉತ್ತರ |
|---|---|---|
| 1 | ಪೊಲೀಸ್ ಠಾಣೆಗಳಿಗೆ ಸಾರ್ವಜನಿಕರು ದೂರು ನೀಡಿದ ನಂತರ ಠಾಣಾಧಿಕಾರಿಗಳೂ ಕೈಗೊಳ್ಳುವ ಕ್ರಮಗಳಾವುವು: | ಪೊಲೀಸ್ ಠಾಣೆಗಳಲ್ಲಿ ದೂರನ್ನು ಸ್ವೀಕರಿಸಿದ ಕೂಡಲೇ ಠಾಣಾಧಿಕಾರಿಯು ಅದನ್ನು ಸಂಜ್ಞೇಯ ಅಥವಾ ಅಸಂಜ್ಞೇಯ ಅರ್ಜಿಯೆಂದು ಪರಿಶೀಲಿಸಿ ಸಂಜ್ಞೇಯ ದೂರಾಗಿದ್ದಲ್ಲಿ ಪ್ರಥಮ ವರ್ತಮಾನ ವರದಿ. ದಾಖಲಿಸಿ ಪ್ರತಿಯನ್ನು ದೂರುದಾರರಿಗೆ ನೀಡುತ್ತಾರೆ ಹಾಗೂ ನ್ಯಾಯಾಲಯಕ್ಕೆ ಸಲ್ಲಿಸುತ್ತಾರೆ. ಪ್ರಕರಣದ ತನಿಖೆಯನ್ನು ಕೈಗೊಂಡು, ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಲಾಗುತ್ತದೆ. ಈ ಎಫ್.ಐ.ಆರ್. ಪ್ರಕರಣಗಳಲ್ಲಿ ಅಳವಡಿಸಲಾದ ಕಲಂ ಗಳ ಮೇಲೆ ಅವಶ್ಯವಿದ್ದಲ್ಲಿ ಆರೋಪಿಗಳನ್ನು ಬಂಧಿಸಿ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತದೆ.<br><br>ಅಸಂಜ್ಞೇಯ ಅರ್ಜಿಯಾಗಿದ್ದಲ್ಲಿ ಎನ್.ಸಿ.ಆರ್. ದಾಖಲಿಸಿ ಸ್ವೀಕೃತಿಯನ್ನು ದೂರುದಾರರಿಗೆ ನೀಡುತ್ತಾರೆ. ತದನಂತರ, ಅದರ ವಿಚಾರಣೆ ಮಾಡಿ, ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. |
| 2 | ದೂರಿನ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ದೂರುದಾರರಿಗೆ ಮಾಹಿತಿ ನೀಡುವ ವ್ಯವಸ್ಥೆ ಇದೆಯೇ; ಎಷ್ಟು ದಿವಸಗಳಲ್ಲಿ ಯಾವ ರೀತಿ ಮಾಹಿತಿ ನೀಡಲಾಗುತ್ತದೆ; ಇಲ್ಲದಿದ್ದಲ್ಲಿ ಇನ್ನೂ ಮುಂದೆ ಮಾಹಿತಿ ನೀಡಲಾಗುವುದೇ; | ಹೌದು.<br>1. ಸಾರ್ವಜನಿಕರು ಪೊಲೀಸ್ ಠಾಣೆಗಳಲ್ಲಿ ನೀಡಿದ ದೂರಿನ ಮೇಲೆ ಪ್ರಥಮ ವರ್ತಮಾನ ವರದಿ ದಾಖಲಾತಿ ಸಂದರ್ಭದಲ್ಲಿ ತಕ್ಷಣವೇ ಅದರ ಪ್ರತಿಯನ್ನು ದೂರುದಾರರಿಗೆ ನೀಡಲಾಗುತ್ತದೆ.<br>2. ಅರ್ಜಿ ವಿಚಾರಣೆಯ ನಂತರ ಅರ್ಜಿ ವಿಚಾರಣೆಯ ಮಾಹಿತಿಯನ್ನು 15 ದಿನದಲ್ಲಿ ಅರ್ಜಿದಾರರಿಗೆ ಹಿಂಬರಹ ಮೂಲಕ ತಿಳಿಸುವಂತೆ ಸ್ಥಾಯಿ ಆದೇಶ ಸಂ. 920ರಲ್ಲಿ ಸೂಚನೆಯನ್ನು ನೀಡಲಾಗಿದೆ.<br>3. ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011 ಮತ್ತು (ತಿದ್ದುಪಡಿ) ಅಧಿನಿಯಮ 2014ರ ಪ್ರಕಾರ ಪೊಲೀಸ್ ಠಾಣೆಗಳಲ್ಲಿ ಅರ್ಜಿಗಳನ್ನು ಸ್ವೀಕರಿಸಿ ವಿಲೇವಾರಿ ಮಾಡಲು 45 ಕೆಲಸದ ದಿನಗಳನ್ನು ನೀಡಲಾಗಿದೆ.<br>4. ಪ್ರತೀ ತಿಂಗಳು ಅಪರಾಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಿ ದೂರುದಾರರಿಗೆ ತಿಳಿಸಬಹುದಾದಷ್ಟು ಮಾಹಿತಿಯನ್ನು ದೂರುದಾರರಿಗೆ ನೀಡುವಂತೆ ಸ್ಥಾಯಿ ಆದೇಶ ಸಂ. 968ರಲ್ಲಿ ಸೂಚನೆಯನ್ನು ನೀಡಲಾಗಿದೆ.<br>5. ಪ್ರತೀ ತಿಂಗಳು ನೊಂದವರ/ಫಿರ್ಯಾದುದಾರರ ದಿನವನ್ನು ಪ್ರತೀ ಠಾಣೆಯಲ್ಲಿ ಆಚರಿಸಲಾಗುತ್ತಿದ್ದು, ಆ ಸಂದರ್ಭದಲ್ಲೂ ಮಾಹಿತಿಯನ್ನು ನೀಡಲಾಗುತ್ತದೆ. |